# ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ, ಹುನಗುಂದ ಇವರ ನ್ಯಾಯಾಲಯದಲ್ಲಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: **1071/2021**

ಪಿರ್ಯಾದಿ

1) ಸರಕಾರದ ಪರವಾಗಿ -

ಃ ವಿರುದ್ಧಃ

\- ಆರೋಪಿತ

1) ತಿಪ್ಪಣ್ಣ ಶಿವಸಂಗಪ್ಪ ಕೊಣ್ಣುರ

## ಃ ದಂಡ ಪ್ರಕ್ರಿಯಾ ಸಂಹಿತೆಯ ಕಲಂ-251 ರಡಿ ಆರೋಪಣೆ ಃ

ಶ್ರೀಮತಿ ಚೇತನಾ ಆರಿಕಟ್ಟಿ, ಬಿ.ಎ., ಎಲ್.ಎಲ್.ಬಿ (ಹಾನರ್ಸ್), ಎಲ್.ಎಲ್.ಎಮ್., ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಹುನಗುಂದ ಇವರ ಮುಂದೆ ಆರೋಪಿತರಾದ ನೀವು ಃ-

1) ತಿಪ್ಪಣ್ಣ ಶಿವಸಂಗಪ್ಪ ಕೊಣ್ಣುರ , ವಯಾ: 48 ವರ್ಷ,
ಸಾ: ಅಮೀನಗಡ, ತಾ. ಹುನಗುಂದ.

ನಿಮ್ಮ ಮೇಲೀರುವ ದೋಷಾರೋಪಣೆಯು ಈ ಕೆಳಗಿನಂತೆ ಇದೆ.

ದಿನಾಂಕಃ 19-06-2021 ರಂದು 19-30 ಗಂಟೆಗೆ ಅಮೀನಗಡ್ ಪೋಲಿಸ ಠಾಣೆ ಹದ್ದಿ ಪೈಕಿ ಕಮತಗಿ-ಅಮೀನಗಡ ಎಸ್.ಎಚ್.20 ಡಾಂಬರ ರಸ್ತೆಯ ಮೇಲೆ ದೊಡ್ಡನ್ನವರ ಮೈನ್ಸ ಸಮೀಪ ಹನಮಂತ ಗೌಡರ ಇವರ ಜಮೀನದ ಹತ್ತಿರ 1 ನೇ ಆರೋಪಿತರಾದ ನೀವು ನಿಮ್ಮ ದ್ವಿ ಚಕ್ರ ವಾಹನ ಚಲಾಯಿಸಲು ಪರವಾನಿಗೆ ವ ಲೈಸನ್ಸ ಇಲ್ಲವೆಂಬ ಸಂಗತಿ ಗೊತ್ತಿದ್ದರು ಹಾಗೂ ನೀನು ಚಲಾಯಿಸುತ್ತಿದ್ದ ಮೋಟಾರ ಸೈಕಲಗೆ ನಂ.ಕೆಎ-29-ಇಡಿ-9411 ನೇದ್ದಕ್ಕೆ ಇನ್ಸೂರನ್ಸ ಇಲ್ಲವೆಂಬ ಸಂಗತಿ ಗೊತ್ತಿದ್ದರು ಸಹ, ಸದರ ಮೋಟರ ಸೈಕಲನ್ನು ಕಮತಗಿ ಕಡೆಯಿಂದ ಅತೀ ವೇಗವಾಗಿ ನಿರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಯಿಸಿಕೊಂಡು ಬಂದು ತನ್ನ ರಸ್ತೆಯ ಸೈಡಿಗೆ ಹೋಗದೆ ಮೃತ ಬುರಾನಸಾಬ ಇದ್ದಲಗಿ ಈತನು ಚಾಸಾ-4 ರವರನ್ನು ಮೋಟಾರ ಸೈಕಲ ನಂ. ಕೆಎ-29-ಇಸಿ-9936 ನೇದ್ದರ ಮೇಲೆ ಕೂಡಿಸಿಕೊಂಡು ಅದನ್ನು ಅಮೀನಗಡ ಕಡೆಯಿಂದ ಕಮತಗಿ ಕಡೆಗೆ ನಿಧಾನವಾಗಿ ತನ್ನ ರಸ್ತೆಯ ಸೈಡಗೆ ಚಲಾಯಿಸಿಕೊಂಡು ಹೊರಟಿದ್ದ ಸದರ ಮೋಟರ ಸೈಕಲಗೆ ಅಪಘಾತ ಪಡಿಸಿ ಬುರಾನಸಾಬ ಇದ್ದಲಗಿ ಈತನ ತಲೆಗೆ ಭಾರಿ ಗಾಯ ಒಳಪೆಟ್ಟು ಪಡಿಸಿ, ಆತನಿಗೆ ಉಪಚಾರ ಫಲಿಸದೇ ದಿ. 20-06-2021 ರಂದು 15-25 ಕ್ಕೆ

Scanned with OKEN Scanner

ಮರಣ ಹೊಂದುವಂತೆ ಮಾಡಿದ್ದು ಮತ್ತು ಚಾಸಾ-4 ರವರಿಗೆ ಬಲ ಚಪ್ಪೆಯ ಹತ್ತಿರ ಎಡಮುಂಡೆಯ ಹತ್ತಿರ ಭಾರಿ ಗಾಯ ಒಳಪಟ್ಟು ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ-279, 338, 304(ಎ) ಐಪಿಸಿ ಹಾಗೂ ಕಲಂ. 3 ರೆ/ವ 181, 146 ರೆ/ವ 196 ಎಮ್.ವಿ.ಕಾಯ್ದೆಡಿ ನನ್ನ ಸಂಜ್ಞೆಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುವಿರಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲಿನ ಆಪಾದನೆಯನ್ನು ಓದಿ ಹೇಳಲಾಗಿ ನಿಮಗೆ ತಿಳಿಯಿತೇ?

ಉತ್ತರ ಃ ತಿಳಿಯಿತು

ಪ್ರಶ್ನೆ-2 ಃ ಸದರ ಗುನ್ಹೆಗೆ ತಪ್ಪೊಪ್ಪಿಕೊಳ್ಳುವಿಯೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರ ಃ ವಿಚಾರಣೆಯಾಗಬೇಕು

ಸ್ಥಳ : ಹುನಗುಂದ

ದಿನಾಂಕ : 07-04-2022.

ಓ.ಹೇ.ಕೆ.ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಮ.ಎಫ್.ಸಿ., ಹುನಗುಂದ

Scanned with OKEN Scanner